ಅಧ್ಯಕ್ಷರು : ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿರುವುದರಿಂದ ದಾನ ಕೊಡುವವರು ಮಿನಿಮಮ್ ಇಷ್ಟು ಕೊಡಬೇಕು ಎಂದು ಹೇಳಿ ಏನಾದರೂ ಮಾಡುವುದಕ್ಕೆ ಸಾಧ್ಯವೇ ?

SRI K.M. KRISHNA REDDY : Beggers are not choosers.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) : 38ನೇ ಪಟ್ಟಿಯಲ್ಲಿರುವ ಒಟ್ಟು 48 ಪ್ರಶ್ನೆಗಳ ಪೈಕಿ ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಲಾಗಿದೆ.

ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ

2933 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) *ಬಳ್ಳಾರಿ ನಗರಕ್ಕೆ ಕುಡಿಯುವ ನೀರನ್ನು ಕೊಡುವ ಸಲುವಾಗಿ, ಅಲ್ಲಿರುವ ಅಣೆಕಟ್ಟೆಯ ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೆ ?*

2) *ಹಾಗಿದ್ದಲ್ಲಿ, ದುರಸ್ಥಿಗಾಗಿ ಅಂದಾಜು ಮಾಡಲಾದ ಅಂದಾಜು ಪಟ್ಟಿಯ ಮೊತ್ತ ?*

3) *ಟೆಂಡರ್‌ಗಳನ್ನು ಕರೆಯಲಾಗಿದೆಯೆ ?*

4) *ಹಾಗೂ 100 ಮೀ. ಉದ್ದದ ಹೊಸ ಕೊಳವೆ ಮಾರ್ಗವನ್ನು ಹಾಕಿ, ನೀರನ್ನು ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಪಂಪ್ ಮಾಡುವ ಕಾಮಗಾರಿಯನ್ನು ಸಹ, ಸರ್ಕಾರ ಕೈಗೆತ್ತಿಕೊಂಡಿದೆಯೇ ?*

5) *ದುರಸ್ಥಿ ಕಾಮಗಾರಿಯು ಮತ್ತು ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುವುದು ?*

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಹೌದು.

2) ರೂ. 42.50 ಲಕ್ಷಗಳು.

3) ಕರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ, ಪರಿಶೀಲನೆಯ ಹಂತದಲ್ಲಿರುತ್ತದೆ.

4) ಹೌದು.

5) ಈಗಾಗಲೇ ಕಾಟನ್‌ಪೇಟೆ ಮಾರ್ಕೆಟ್ ಸರಹದ್ದಿನಲ್ಲಿ ಬರುವ ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಮುಗಿದಿದ್ದು, ಕೊಳವೆ

ಮಾರ್ಗದ ಗ್ಯಾಪ್‌ಗಳನ್ನು ಮುಚ್ಚುವ ಕಾಮಗಾರಿಯು ಚಾಲತಿಯಲ್ಲಿರುತ್ತದೆ. ಅಣೆಕಟ್ಟೆಯ ದುರಸ್ಥಿ ಕಾಮಗಾರಿಯು ಸೆಪ್ಟೆಂಬರ್ 97ರಲ್ಲಿಯೂ ಮತ್ತು ಕೊಳವೆ ಮಾರ್ಗ ಹಾಕುವ ಕಾಮಗಾರಿಯೂ ಇನ್ನೂ 15 ದಿನಗಳಲ್ಲಿ ಪೂರ್ಣಗೊಳ್ಳುವುದು.

ವಿ.ಎಸ್.ಐ.ಎಲ್‌ನಲ್ಲಿದ ಸರ್ಕಾರದ ಷೇರು ಬಂಡವಾಳ

2934 -'ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿ.ಐ.ಎಸ್.ಎಲ್.ನಲ್ಲಿ ರಾಜ್ಯ ಸರ್ಕಾರದ ಷೇರು ಬಂಡವಾಳ ಎಷ್ಟಿತ್ತು?

ಆ) ಈ ಷೇರು ಬಂಡವಾಳವನ್ನು ಸರ್ಕಾರವು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾಗೆ ವರ್ಗಾಯಿಸಿದೆಯೇ?

ಇ) ಇದಕ್ಕೆ ಕಾರಣಗಳೇನು?

ಈ) ಈ ಕಾರ್ಖಾನೆಯ ಒಡೆತನವನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾಗೆ ಸರ್ಕಾರ ನೀಡಿದೆಯೇ?

ಉ) ಇನ್ನು ಮುಂದೆಯೂ ರಾಜ್ಯ ಸರ್ಕಾರವು ನೀಡಲಿರುವ ಹಾಗೂ ಮುಂದುವರಿಸಲಿರುವ ಸೌಲಭ್ಯಗಳು ಯಾವುವು?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ತಲಾ 10 ರೂ.ಗಳ 6,77,66,750 ಷೇರುಗಳು - ರೂ.67,76,67,500.

ಆ) ಹೌದು.

ಇ) 1. ವಿ.ಐ.ಎಸ್.ಎಲ್. ಕಾರ್ಖಾನೆಯನ್ನು ಆಧುನೀಕರಣಗೊಳಿಸಲು, ಮತ್ತು

2. ಈ ಕಂಪನಿಯು ಸತತವಾಗಿ ನಷ್ಟ ಅನುಭವಿಸುತ್ತಿದ್ದು, ಅದನ್ನು ಲಾಭದಾಯಕವಾಗಿ ಪರಿವರ್ತಿಸಲು ಭಾರತದ ಉಕ್ಕು ಪ್ರಾಧಿಕಾರದೊಂದಿಗೆ ಸಾಕಷ್ಟು ಬಂಡವಾಳ ಮತ್ತು ತಾಂತ್ರಿಕ ಪರಿಣತೆ ಇರುವುದರಿಂದ.

ಈ) ಹೌದು.

ಉ) ವಿವರವನ್ನು ಅನುಬಂಧದಲ್ಲಿ ನೋಡಬಹುದು.